ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರಃ 529-17

ಚಾಸಾಃ 1 ಪ್ರಾಸಾಃ 1

ದಿನಾಂಕಃ12.03.2020

| | | |
|---|---|---|
| ವಾಗ್ಮೂಲದವರ ಹೆಸರು | ಃ | ರಾಘವೇಂದ್ರ ಉಡುಪ |
| ತಂದೆಯ ಹೆಸರು | ಃ | ಶ್ರೀನಿವಾಸ ಉಡುಪ |
| ವಯಸ್ಸು | ಃ | 41 ವರ್ಷ |
| ಉದ್ಯೋಗ | ಃ | ಖಾಸಗಿ ಉದ್ಯೋಗ |
| ವಾಸ ಸ್ಥಳ | ಃ | ಬೀಜಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ

ಮೃತ ಗುರುರಾಜ ಬಾಯರಿಯವರು ನನ್ನ ಸಹೋದರ ಮಾವ ಆಗಿರುತ್ತಾರೆ. ದಿಃ 10-12-2016 ರಂದು ಬೆಳಿಗ್ಗೆ ಸುಮಾರು 9 ಗಂಟೆ ಸಮಯಕ್ಕೆ ಬೀಜಾಡಿಯ ವೈ ಜಂಕ್ಷನ್ ಬಳಿ ನಡೆದುಕೊಂಡು ಹೋಗುತ್ತಿರುವ ಸಮಯದಲ್ಲಿ ಉಡುಪಿ ಕಡೆಯಿಂದ ಕುಂದಾಪುರದ ಕಡೆಗೆ ಬರುತ್ತಿದ್ದ ಒಂದು ಕಾರು ನಂಬ್ರ ಕೆಎಲ್-10-4837 ಟಾಟಾ ಕ್ವಾಲೀಸ್ ಬಂದು ಅವರಿಗೆ ಡಿಕ್ಕಿ ಪಡಿಸಿರುತ್ತದೆ. ಆ ಸಮಯದಲ್ಲಿ ನಾನು ಪಕ್ಕದಲ್ಲಿ ನಿಂತಿದ್ದೆ. ಸದ್ರಿ ಕಾರನ್ನು ಅದರ ಚಾಲಕನು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬರುತ್ತಿದ್ದನು. ಈ ಪರಿಣಾಮ ಸದ್ರಿ ಗುರುರಾಜ ಬಾಯರಿಯವರಿಗೆ ತಲೆಗೆ, ಭುಜಕ್ಕೆ ಹಾಗೂ ಕಾಲಿಗೆ ತೀವ್ರ ಪೆಟ್ಟಾಗಿತ್ತು. ಅಲ್ಲಿಯೇ ಅವರು ಪ್ರಜ್ಞೆ ತಪ್ಪಿ ಹೋಗಿರುತ್ತದೆ. ನಂತರ ನಾನು ಸಾರ್ವಜನಿಕರೊಂದಿಗೆ ಹಾಗೂ ವಾಹನದ ಚಾಲಕನೊಂದಿಗೆ ಸೇರಿ ಅಲ್ಲಿ ಇದ್ದಂತಹ ಎನ್ ಆರ್ ಆಚಾರ್ಯ ಆಸ್ಪತ್ರೆಗೆ ಸೇರಿಸಿರುತ್ತೇವೆ. ನಂತರ ಸದ್ರಿ ವ್ಯಕ್ತಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲದ ಕೆಎಂಸಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಅದೇ ದಿನ ಬೆಳಿಗ್ಗೆ 11-30 ಗಂಟೆ ಸಮಯಕ್ಕೆ ದೂರನ್ನು ದಾಖಲಿಸಿರುತ್ತೇನೆ. ಸಾಕ್ಷಿಯು ಸದ್ರಿ ದೂರು ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ನಂತರ ಪೊಲೀಸರು ಅದೇ ದಿನ 12-30 ಗಂಟೆ ಸಮಯಕ್ಕೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-3 ಮತ್ತು 4ರವರ ಸಮಕ್ಷಮದಲ್ಲಿ ತಕ್ಷೀರು ಸ್ಥಳದ ಮಹಜರ್ ಹಾಗೂ ಕರಡು ನಕಾಶೆಯನ್ನು ತಯಾರು ಮಾಡಿರುತ್ತಾರೆ. ಸದ್ರಿ ದಾಖಲೆಗಳನ್ನು ಸಾಕ್ಷಿಗೆ ತೋರಿಸಲಾಗಿದ್ದು, ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ

ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-2 ಮತ್ತು 3 ಎಂದು, ಸಾಕ್ಷಿ ಸಹಿಗಳನ್ನು ನಿಪಿ-2 ಎ ಮತ್ತು ನಿಪಿ-3 ಎ ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಅಪಘಾತಕ್ಕೆ ಕಾರಣವಾದಂತಹ ಕಾರನ್ನು ಪೊಲೀಸರು ಮುಂದಿನ ಕ್ರಮಕ್ಕಾಗಿ ವಶಪಡಿಸಿಕೊಂಡಿರುತ್ತಾರೆ. ನಂತರ ದಿಃ **15-12-2016** ರಂದು ಸದ್ರಿ ವ್ಯಕ್ತಿಯು ಮೃತಪಟ್ಟಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ಮರುಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ಕಡತದಲ್ಲಿ ಇದ್ದಂತಹ ಭಾವಚಿತ್ರಗಳಲ್ಲಿನ ವಾಹನವನ್ನು ನೋಡಿ ಗುರುತಿಸಿದ್ದು, ಸದ್ರಿ ಭಾವಚಿತ್ರಗಳನ್ನು ಗುರುತಿಸಲು ಅಭಿಯೋಜನೆಯವರು ಯಾವುದೇ ಅರ್ಜಿ ಹಾಗೂ ಪ್ರಮಾಣ ಪತ್ರವನ್ನು ಸಲ್ಲಿಸದ ಕಾರಣ ಸದ್ರಿ ಭಾವಚಿತ್ರಗಳು ದ್ವಿತೀಯಾ ಸಾಕ್ಷ್ಯಯಾದ ಕಾರಣ ಅವುಗಳ ಗುರುತಿಸುವಿಕೆಯವನ್ನು ಕೈಬಿಡಲಾಯಿತು.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲವಕಾಶವನ್ನು ಕೇಳಿದ್ದು, ಯಾವುದೇ ಸಮಂಜಸವಾದ ಕಾರಣವನ್ನು ತಿಳಿಸದೆ ಇದ್ದುದರಿಂದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ